ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ ಪದವಿಪೂರ್ವ ಕಾಲೇಜುಗಳಿಗೆ ಕೊಠಡಿಗಳ ಕೊರತೆ.

2887 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದ ಪದವಿ ಪೂರ್ವ ಶಿಕ್ಷಣ ಇಲಾಖೆಯ ದಿನಾಂಕ 24-5-1997 ರಂದು ಹೊರಡಿಸಿದ್ದ ಸುತ್ತೋಲೆಯ ಪ್ರಕಾರ ಪದವಿ ಪೂರ್ವ ಕಾಲೇಜುಗಳ ಪ್ರಾರಂಭದ ಮತ್ತು ಮುಕ್ತಾಯದ, ವೇಳೆ ಬದಲಾವಣೆ ಆಗಿರುವುದು ನಿಜವಲ್ಲವೇ?*

ಆ) *ಹಾಗಿದ್ದಲ್ಲಿ, ಹುಬ್ಬಳ್ಳಿ, ಗ್ರಾಮೀಣ ಕ್ಷೇತ್ರದಲ್ಲಿ ಬರತಕ್ಕ ಗೋಪನಕೊಪ್ಪ ಪದವಿ ಪೂರ್ವ ಕಾಲೇಜು ಹೈಸ್ಕೂಲ್ ಕಟ್ಟಡದಲ್ಲಿ ನಡೆಯುತ್ತಿರುವುದರಿಂದ ಮತ್ತು ಕೊಠಡಿಗಳ ಕೊರತೆ ಇರುವುದರಿಂದ ಮೇಲಿನ ಸುತ್ತೋಲೆಯಿಂದ ಸದರಿ ಕಾಲೇಜಿನ ವೇಳೆ ಬದಲಾವಣೆ ಆಗಿ ಅಲ್ಲಿಯ ವಿದ್ಯಾರ್ಥಿಗಳು ತುಂಬಾ ತೊಂದರೆ ಅನುಭವಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸದರಿ ತೊಂದರೆ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್. ಜಿ. ಗೋವಿಂದಗೌಡ (ಶಿಕ್ಷಣ ಸಚಿವರು) :

ಅ) -ನಿಜ-

ಆ) ಸದರಿ ಕಾಲೇಜಿನಲ್ಲಿ ಕೊಠಡಿಗಳ ಕೊರತೆ ಇದೆ ಎನ್ನುವುದು ನಿಜವಲ್ಲ. ಈ ಕಾಲೇಜಿನಲ್ಲಿ 22 ಕೊಠಡಿಗಳಿದ್ದು ಈ ಕೊಠಡಿಗಳನ್ನು ಕಾಲೇಜು ಮತ್ತು ಹೈಸ್ಕೂಲಿನ ತರಗತಿಗಳನ್ನು ನಡೆಸಲು ಉಪಯೋಗಿಸಲಾಗಿದೆ. ಆದಲ್ಲದೆ ಇನ್ನೂ ಎರಡು ಕೊಠಡಿಗಳು ನಿರ್ಮಾಣವಾಗುತ್ತಿದ್ದು ಇನ್ನೂ ಸ್ವಲ್ಪ ದಿನದಲ್ಲೇ ನಿರ್ಮಾಣ ಪೂರ್ತಿ ಗೊಳ್ಳುತ್ತದೆ. ಈಗಿರುವ ಸ್ಥಳಾವಕಾಶವು ವೇಳೆ ಬದಲಾವಣೆಗೊಂಡ ನಂತರವೂ ತರಗತಿಗಳನ್ನು ನಡೆಸಲು ಸಾಕಾಗುತ್ತದೆ. ಸಮಯ ಬದಲಾವಣೆಯಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಿಲ್ಲ.

ಹುಬ್ಬಳ್ಳಿಯ ಶ್ರೀ ವಾಲ್ಮೀಕಿ ವಿದ್ಯಾ ಸಂಸ್ಥೆ ಸಿ.ಪಿ.ಎಡ್. ಕಾಲೇಜಿಗೆ ಮಾನ್ಯತೆ

2888 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ 1996-97ನೇ ಸಾಲಿಗೆ ಮತ್ತು 1997 ಜುಲೈ ತಿಂಗಳಿನವರೆಗೆ ಸರ್ಕಾರ ಮಾನ್ಯತೆ ನೀಡಿರುವ ಸಿ.ಪಿ.ಇಡಿ. ಕಾಲೇಜುಗಳ ಸಂಖ್ಯೆ ಎಷ್ಟು? ಅವು ಯಾವುವು?*

ಆ) *ಮಾನ್ಯತೆ ನೀಡಲು ಅನುಸರಿಸಿದ ಅಳತೆಗೋಲುಗಳೇನು?*

ಇ) *ಹುಬ್ಬಳ್ಳಿಯ ಶ್ರೀ ವಾಲ್ಮೀಕಿ ವಿದ್ಯಾ ಸಂಸ್ಥೆ ಎಲ್ಲಾ ಸೌಲಭ್ಯ ಹೊಂದಿ ಸಿಪಿಇಡಿ ಕಾಲೇಜು ಮಾನ್ಯತೆ ಪಡೆಯಲು ಅರ್ಜಿ ಸಲ್ಲಿಸಿದ್ದು, ಈ ಸಂಸ್ಥೆಗೆ ಮಾನ್ಯತೆ ನೀಡಲಾಗಿದೆಯೇ?*

ಈ) *ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು? ಈ ಸಂಸ್ಥೆಗೆ ಯಾವಾಗ ಮಾನ್ಯತೆ ನೀಡಲಾಗುವುದು?*